## 2019 ಕ.ತೀ.ವ 1543

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

## ಹಮೀದ್ –ವಿರುದ್ಧ– ಕರ್ನಾಟಕ ರಾಜ್ಯ (ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಕಂದಾಯ ಇಲಾಖೆ) ಮತ್ತು ಇತರರು*

ಭಾರತ ಸಂವಿಧಾನದ 226ನೇ ಹಾಗೂ 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿ.

ಕರ್ನಾಟಕ ಅಪೀಲು ನ್ಯಾಯಾಧಿಕರಣ, ಬೆಂಗಳೂರು ಇವರು ಅಪೀಲು ಸಂಖ್ಯೆ: 922/2003ರಲ್ಲಿ (ಅನುಬಂಧ–ಎ) ಹೊರಡಿಸಿದ ದಿನಾಂಕ: 13.1.2012ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಇದರಲ್ಲಿನ ಅರ್ಜಿದಾರನು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ ತಿದ್ದುಪಡಿಯಾದ ಉಪಬಂಧಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ನಮೂನೆ ಸಂಖ್ಯೆ: 7ಎ ಇದರಲ್ಲಿ ಅರ್ಜಿ ಸಲ್ಲಿಸಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ರಲ್ಲಿ 57 ಸೆಂಟ್‌ಗಳಷ್ಟು ಜಮೀನಿನ ಸಂಬಂಧದಲ್ಲಿ ಅಧಿಭೋಗದ ಹಕ್ಕನ್ನು ಕೋರಿದ್ದಾನೆ ಮತ್ತು ಅದನ್ನು ಪರಿಗಣಿಸಿ ಸಕ್ಷಮ ಪ್ರಾಧಿಕಾರಿಗಳು ಮಂಜೂರಾತಿ ಆದೇಶ ನೀಡಿದ್ದಾರೆ.

ಸದರಿ ಮಂಜೂರಾತಿ ಆದೇಶದಿಂದ ಬಾಧಿತನಾಗಿ ಇದರಲ್ಲಿನ 3ನೇ ಪ್ರತ್ಯರ್ಜಿದಾರ–ಭೂಮಾಲೀಕನು ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಅಪೀಲು ಸಂಖ್ಯೆ: 922/2003ನ್ನು ಸಲ್ಲಿಸಿದ್ದು, ನ್ಯಾಯಾಧಿಕರಣವು ದಿನಾಂಕ: 13.1.2012ರ ತೀರ್ಪಿನ ಮೂಲಕ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶವನ್ನು ತಳ್ಳಿಹಾಕಿದೆ.

*ರಿಟ್ ಅರ್ಜಿ ಸಂಖ್ಯೆ: 49215/2012 (ಎಲ್‌ಆರ್–ಎಸ್‌ಇಸಿ 48ಎ), ದಿನಾಂಕ 2ನೇ ಜುಲೈ, 2019.

ಸದರಿ ನಿರ್ಣಯದಿಂದ ಬಾಧಿತನಾಗಿ ಇದರಲ್ಲಿನ ಅರ್ಜಿದಾರನು, ನ್ಯಾಯಾಧಿಕರಣವು ನೀಡಿದ ತೀರ್ಪು ಒಂದಕ್ಕಿಂತ ಹೆಚ್ಚು ಕಾರಣಗಳಗಾಗಿ ತಪ್ಪಾಗಿದೆ ಎಂದು ವಾದಿಸಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ. ಆತನ ಪ್ರಕಾರ, ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ರಲ್ಲಿ 57 ಸೆಂಟ್ ಜಮೀನು ಆತನ ಅಜ್ಜನು ಹಿಡುವಳದಾರನಾಗಿದ್ದ ಜಮೀನಾಗಿದ್ದು, ಆತನು ಅದರ ಸ್ವಾಧೀನ ಮತ್ತು ಅನುಭೋಗ ಹೊಂದಿರುವುದಾಗಿ, ಅದಕ್ಕೆ ಸದರಿ ಗ್ರಾಮ ಪಂಚಾಯಿತಿಗೆ ಸ್ವತ್ತು ತೆರಿಗೆಯನ್ನು ಸಲ್ಲಿಸಿದುದಾಗಿ ತಿಳಿಸಿ ದಸ್ತಾವೇಜುಗಳನ್ನು ಸಲ್ಲಿಸಲಾಗಿದ್ದು, ಅದನ್ನು ಮತ್ತು 4ನೇ ಪ್ರತ್ಯರ್ಜಿದಾರಳ ಹೇಳಿಕೆಯನ್ನು ನ್ಯಾಯಾಧಿಕರಣವು ನಿರ್ಲಕ್ಷಿಸಿದೆ ಎಂದು ವಾದಿಸಿದ್ದಾನೆ.

ಇದಕ್ಕೆ ತದ್ವಿರುದ್ಧವಾಗಿ, ನಮೂನೆ ಸಂಖ್ಯೆ: 7ಎ ಇದರಲ್ಲಿನ ಅರ್ಜಿಯೊಂದಿಗೆ ಅರ್ಜಿದಾರನು ಹಾಜರುಪಡಿಸಿರುವ ದಸ್ತಾವೇಜುಗಳು ಸ್ವತಃ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ ತಿದ್ದುಪಡಿಯಾದ ಉಪಬಂಧಗಳ 77ಎ ಪ್ರಕರಣದ ಅಡಿಯಲ್ಲಿ ಕೋರಿದ ಪರಿಹಾರಕ್ಕೆ ಆತನನ್ನು ಸ್ಪಷ್ಟವಾಗಿ ಹಕ್ಕು ವಂಚಿತನನ್ನಾಗಿಸುತ್ತದೆ; ಸರ್ವೆ ಸಂಖ್ಯೆ: 51/1ನ್ನು ಹೊಂದಿರುವ ಜಮೀನು ಕೃಷಿ ಭೂಮಿಯಲ್ಲ; ಇದರಲ್ಲಿನ ಅರ್ಜಿದಾರನು ವೃತ್ತಿಯಿಂದ ಕೃಷಿಕನಲ್ಲವೆಂಬುದು ನಮೂನೆ ಸಂಖ್ಯೆ: 7ಎ ಇದರಲ್ಲಿ ಸಲ್ಲಿಸಿದ ಆತನ ಅರ್ಜಿಯಲ್ಲಿ ಬಹಿರಂಗವಾಗಿದ್ದು, ಅದರಲ್ಲಿ ಆತನು ತನ್ನ ವೃತ್ತಿ ವ್ಯವಹಾರವೆಂದು ಹೇಳಿದ್ದಾನೆ. ಆತನ ಅರ್ಜಿಯಲ್ಲಿ, ಹಿಡುವಳಿದಾರನಾಗಿ ಆಕ್ಷೇಪಣೆಯಲ್ಲಿರುವ ಜಮೀನಿನ ಸ್ವಾಧೀನವನ್ನು ಹೊಂದಿರುವುದಾಗಿ ಮತ್ತು ಸಾಗುವಳಿ ಮಾಡುತ್ತಿದ್ದುದಾಗಿ ವಾದಿಸಿದಾಗ್ಯೂ, ಆತನು ಹಾಜರುಪಡಿಸಿದ ದಸ್ತಾವೇಜುಗಳಿಂದ ಕಂಡುಬರುವಂತೆ ಅದು ಸಾಗುವಳಿಯಾಗದಿರುವ ಜಮೀನಾಗಿದೆ. ಇದಲ್ಲದೆ, ಸರ್ವೆ ಸಂಖ್ಯೆ: 51/1ರಲ್ಲಿರುವ 57 ಸೆಂಟ್‌ಗಳ ವಿಸ್ತೀರ್ಣದ ಇಡೀ ಜಮೀನು ಅರ್ಜಿದಾರನ ಸ್ವಾಧೀನದಲ್ಲಿದೆ ಎಂದು ಆತನು ವಾದಿಸಿದಾಗ್ಯೂ, ಅರ್ಜಿದಾರನು ಸರ್ವೆ ಸಂಖ್ಯೆ: 51/1ರಲ್ಲಿ ನಿರ್ಮಿಸಲಾಗಿರುವ ಕಟ್ಟಡದ ಸ್ವಾಧೀನವನ್ನು ಹೊಂದಿರುವನೇ ಹೊರತು ಇಡೀ 57 ಸೆಂಟ್‌ಗಳಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನವನ್ನು ಅಲ್ಲವೆಂಬುದು 3ನೇ ಪ್ರತ್ಯರ್ಜಿದಾರನ ವಾದವಾಗಿದೆ.

**ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯದ ಗುಣಾರ್ಹತೆಗಳ ವಿವೇಚನೆಯಿಂದ, 3ನೇ ಪ್ರತ್ಯರ್ಜಿದಾರನ ಸದರಿ ನಿವೇದನೆಗಳ ಬಗ್ಗೆ ಈ ನ್ಯಾಯಾಲಯಕ್ಕೆ ನಿರುಪಾಧಿಕವಾಗಿ ಯಾವುದೇ ಸಂಶಯವಿಲ್ಲ. ಕೃಷಿಯೇತರ ಭೂಮಿಯ, ನಿರ್ದಿಷ್ಟವಾಗಿ ವಾಸದ ಮನೆ ಇರುವ ಪುಂಜಾ ಜಮೀನಿನ ಸಂಬಂಧದಲ್ಲಿನ ಅಧಿಭೋಗದ ಹಕ್ಕನ್ನು ನೀಡುವ ಆತನ ಅರ್ಜಿಯನ್ನು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 77ಎ ಪ್ರಕರಣದ ಅಡಿಯಲ್ಲಿನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.**

**ತದನುಸಾರವಾಗಿ, ಕರ್ನಾಟಕ ಅಪೀಲು ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಸ್ಥಿರೀಕರಿಸಿ, ಈ ನ್ಯಾಯಾಲಯದ ಹಸ್ತಕ್ಷೇಪದ ಅಗತ್ಯವಿಲ್ಲವೆಂದು ನಿರ್ಣಯಿಸಿ ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.**

ಅರ್ಜಿದಾರರ ಪರ : ಶ್ರೀ ಪುಂಡಿಕಾಯಿ ಈಶ್ವರ ಭಟ್, ನ್ಯಾಯವಾದಿ.

1ನೇ ಮತ್ತು 2ನೇ ಪ್ರತ್ಯರ್ಜಿದಾರರ ಪರ :ಶ್ರೀಮತಿ ಬಿ.ಪಿ. ರಾಧಾ, ಹೆಚ್ಚುವರಿ ಸರ್ಕಾರಿ ನ್ಯಾಯವಾದಿ.

3ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿ.ಆರ್. ಪ್ರಸನ್ನ, ನ್ಯಾಯವಾದಿ.

4ನೇ ಪ್ರತ್ಯರ್ಜಿದಾರರ ಪರ : ಶ್ರೀ ಕೆ. ಚಂದ್ರನಾಥ್ ಅರಿಗ, ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:**

ಇದರಲ್ಲಿನ ಅರ್ಜಿದಾರನು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ ತಿದ್ದುಪಡಿಯಾದ ಉಪಬಂಧಗಳ ಅಡಿಯಲ್ಲಿ ಸಕ್ಷಮ ಪ್ರಾಧಿಕಾರದ, ಎಂದರೆ 2ನೇ ಪ್ರತ್ಯರ್ಜಿದಾರ–ಸಹಾಯಕ ಆಯುಕ್ತರ ಮುಂದೆ ನಮೂನೆ ಸಂಖ್ಯೆ: 7ಎ ಇದರಲ್ಲಿ ಅರ್ಜಿದಾರನಾಗಿದ್ದಾನೆ. ಸದರಿ ಅರ್ಜಿಯಲ್ಲಿ, ಅರ್ಜಿದಾರನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ:

51/1ರಲ್ಲಿ 57 ಸೆಂಟ್‌ಗಳಷ್ಟು ಜಮೀನಿನ ಸಂಬಂಧದಲ್ಲಿ ಅಧಿಭೋಗದ ಹಕ್ಕನ್ನು ಕೋರಿದ್ದಾನೆ.

2. ಅರ್ಜಿದಾರನ ಮೊಕದ್ದಮೆ ಏನೆಂದರೆ – ಆತನ ಅಜ್ಜ ಹಸಕುನ್ಹಿ ಬ್ಯಾರಿ ಈತನು, ಮೈಂದಪ್ಪ ಆಳ್ವ ತಿರುವಾಚೆ ಈತನ ಮಗನಾದ ಶಂಕರ್ ಆಳ್ವ ಎಂಬಾತನ ಅಧೀನದಲ್ಲಿ, ನಮೂನೆ ಸಂಖ್ಯೆ: 7ಎ ಇದನ್ನು ಸಲ್ಲಿಸುವ ದಿನಾಂಕಕ್ಕೆ ಮೊದಲು 30 ವರ್ಷಗಳಿಗಿಂತಲೂ ಹೆಚ್ಚು ಕಾಲ ಹಿಡುವಳಿದಾರನಾಗಿದ್ದನು. ಆತನ ಪ್ರಕಾರ, ಮೇಲೆ ಹೇಳಿದ ಜಮೀನಿನ ಸಂಬಂಧದಲ್ಲಿ ತನ್ನ ಅಜ್ಜನು ಹಿಡುವಳಿ ಹಕ್ಕನ್ನು ಹೊಂದಿದ್ದಾಗ್ಯೂ, ನಮೂನೆ ಸಂಖ್ಯೆ: 7ಎ ಸಲ್ಲಿಸುವುದನ್ನು ಆಯ್ಕೆ ಮಾಡಿಕೊಂಡಿರಲಿಲ್ಲ. ಹಾಗಾಗಿ, ತಮ್ಮ ಅಧಿಭೋಗದಲ್ಲಿ ಮತ್ತು ಸಾಗುವಳಿಯಲ್ಲಿ ಇರುವ ಜಮೀನಿನ ಸಂಬಂಧದಲ್ಲಿ ಹಿಡುವಳಿ ಹಕ್ಕನ್ನು ಕೋರುವ ಅವಕಾಶವನ್ನು ಪಡೆಯದಿರುವಂಥ ವ್ಯಕ್ತಿಗಳಿಗೆ ಶಾಸಕಾಂಗಗಳು ಅವಕಾಶವನ್ನು ನೀಡಿದಾಗ, ನಮೂನೆ ಸಂಖ್ಯೆ: 7ಎ ಸಲ್ಲಿಸುವ ಮೂಲಕ ಅದನ್ನು ಕ್ಲೇಮು ಮಾಡುವುದನ್ನು ಆತನು ಆಯ್ಕೆ ಮಾಡಿಕೊಂಡನು. ಆ ಸಂಬಂಧದಲ್ಲಿ, 2ನೇ ಪ್ರತ್ಯರ್ಜಿದಾರ– ಸಹಾಯಕ ಆಯುಕ್ತರ ಮುಂದೆ ನಡೆಸಲಾದ ವ್ಯವಹರಣೆಗಳಲ್ಲಿ, ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸಿದ ನಂತರ, ಸಕ್ಷಮ ಪ್ರಾಧಿಕಾರಿಗಳು ದಿನಾಂಕ: 20.05.2003ರ ಆದೇಶದ ಮೂಲಕ ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ರಲ್ಲಿರುವ 57 ಸೆಂಟ್‌ಗಳಷ್ಟು ಜಮೀನಿನ ಅಧಿಭೋಗದ ಹಕ್ಕಿನ ಮಂಜೂರಾತಿಗಾಗಿ ಮಾಡಿದ ಆತನ ಕ್ಲೇಮನ್ನು ಪರಿಗಣಿಸಿದರು.

3. ಪಶ್ನಿತ ಜಮೀನಿನ ಭೂಮಾಲೀಕನು, ಸಕ್ಷಮ ಪ್ರಾಧಿಕಾರದ ಮುಂದೆ ಪ್ರತ್ಯರ್ಜಿದಾರನಾಗಿದ್ದು, ಇದರಲ್ಲಿನ ಅರ್ಜಿದಾರನ ಪರವಾಗಿ ಪ್ರಶ್ನಿತ ಜಮೀನಿನ ಸಂಬಂಧದಲ್ಲಿನ ಅಧಿಭೋಗದ ಹಕ್ಕನ್ನು ಪ್ರಧಾನ ಮಾಡಿದ ಸಕ್ಷಮ ಪ್ರಾಧಿಕಾರದ ಆದೇಶದಿಂದ ಬಾಧಿತನಾಗಿ, ಅಪೀಲು ಸಂಖ್ಯೆ: 922/2003ರಲ್ಲಿ ಕರ್ನಾಟಕ ಅಪೀಲು ನ್ಯಾಯಾಧಿಕರಣದ ಮುಂದೆ ಅಪೀಲನ್ನು ಸಲ್ಲಿಸಿದ್ದು, ಅದರಲ್ಲಿ ಭೂ ಮಾಲೀಕನು

ಸಲ್ಲಿಸಿದ ಅಪೀಲಿಗೆ ಅನುಮತಿ ನೀಡಲಾಗಿದೆ. ತತ್ಪರಿಣಾಮವಾಗಿ, ದಿನಾಂಕ: 20.5.2003ರ ಆದೇಶದ ಮೂಲಕ ವ್ಯವಹರಣೆ ಸಂಖ್ಯೆ: ಟಿಎಸ್‌ಸಿ. 36/1999-00 ಇದರಲ್ಲಿನ ಅರ್ಜಿದಾರನ ಪರವಾಗಿ ಅಧಿಭೋಗದ ಹಕ್ಕಿನ ಮಂಜೂರಾತಿ ಆದೇಶವನ್ನು, ದಿನಾಂಕ: 13.1.2012ರ ತೀರ್ಪಿನ ಮೂಲಕ ತಳ್ಳಿಹಾಕಲಾಗಿದೆ. ಕರ್ನಾಟಕ ಅಪೀಲು ನ್ಯಾಯಾಧಿಕರಣವು ನೀಡಿದ ಸದರಿ ವಿಭಿನ್ನ ನಿರ್ಣಯದಿಂದ ಬಾಧಿತನಾಗಿ, ಸಕ್ಷಮ ಪ್ರಾಧಿಕಾರದ ಮುಂದೆ ನಮೂನೆ ಸಂಖ್ಯೆ: 7ಎ ಇದರಲ್ಲಿನ ಅರ್ಜಿದಾರನು, ತನ್ನ ಪರವಾಗಿ ಅಧಿಭೋಗದ ಹಕ್ಕಿನ ಮಂಜೂರಾತಿಯನ್ನು ತಳ್ಳಿ ಹಾಕಿ ಕರ್ನಾಟಕ ಅಪೀಲು ನ್ಯಾಯಾಧಿಕರಣವು ನೀಡಿದ ತೀರ್ಪು ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ತಪ್ಪಾಗಿದೆ ಎಂದು ವಾದಿಸಿ ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾನೆ.

4. ಅರ್ಜಿದಾರನ ಪ್ರಕಾರ, ಆತನ ಅಜ್ಜ ಹಸಕುನ್ಹಿ ಬ್ಯಾರಿ ಈತನು, ಮೇಲೆ ಹೇಳಿದ ಜಮೀನಿನಲ್ಲಿ ಹಿಡುವಳಿದಾರನಾಗಿದ್ದನು ಎಂಬ ಸಂಗತಿಯು ಗ್ರಾಮ ಪಂಚಾಯಿತಿಯು ನೀಡಿದ ದಿನಾಂಕ: 14.11.2000 ಮತ್ತು ದಿನಾಂಕ: 18.10.2002 ಈ ಪತ್ರಗಳಿಂದ ದೃಢಪಟ್ಟಿದ್ದು, ಅದರಲ್ಲಿ, ಪ್ರಶ್ನಿತ ಜಮೀನಿನಲ್ಲಿ ಒಂದು ಮನೆ ಇದ್ದು, ಅದು ಅನುಬಂಧ-ಡಿ ಮತ್ತು ಅನುಬಂಧ-ಡಿ1 ಇವುಗಳ ಪ್ರಕಾರ 1972-73ರಿಂದ 2002-03ರವರೆಗೆ ಅರ್ಜಿದಾರನ ಅಜ್ಜನ ಸ್ವಾಧೀನದಲ್ಲಿ ಮತ್ತು ಅನುಭೋಗದಲ್ಲಿ ಇದ್ದವೆಂದು ಮತ್ತು ನಮೂನೆ ಸಂಖ್ಯೆ: 1ಎ (ಗ್ರಾಮ ಪಂಚಾಯಿತಿ ಅಧಿನಿಯಮದ 8ನೇ ನಿಯಮ ಮತ್ತು ನಿಯಮಗಳ ಪ್ರಕಾರ) ಇದರಲ್ಲಿ ನೀಡಲಾದ ದಿನಾಂಕ: 18.10.2002ರಲ್ಲಿರುವ ಸ್ವತ್ತು ತೆರಿಗೆಯನ್ನು ಸ್ವೀಕರಿಸಿದ್ದಕ್ಕಾಗಿನ ಹಿಂಬರಹವು, ಆತನ ಅಜ್ಜನು ದಿನಾಂಕ: 31.3.2003ರಂದು ಇದ್ದಂತೆ ತೆರಿಗೆಯನ್ನು ಸಹ ಸಂದಾಯ ಮಾಡಿರುವನೆಂದು ಸ್ಪಷ್ಟವಾಗಿ ತೋರಿಸಲಾಗಿದೆ. ಈ ಎಲ್ಲಾ ದಸ್ತಾವೇಜುಗಳ ದಾಖಲೆಯಲ್ಲಿ ಲಭ್ಯವಿದ್ದಾಗ್ಯೂ, ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶವನ್ನು ವಿಪರ್ಯಯಗೊಳಿಸುವಾಗ, ಕರ್ನಾಟಕ ಅಪೀಲು ನ್ಯಾಯಾಧಿಕರಣವು ಇದರ ಕಡೆಗೆ ಗಮನ ಹರಿಸಿಲ್ಲ. ಭೂಮಾಲೀಕನ ಸಹೋದರಿಯ ಪರವಾಗಿ ದಾಖಲಿಸಿದ ಹೇಳಿಕೆಯನ್ನು ಸಂಪೂರ್ಣವಾಗಿ ನ್ಯಾಯಾಧಿಕರಣವು ನಿರ್ಲಕ್ಷಿಸಿದೆ ಎಂದು ಸಹ

ಅರ್ಜಿದಾರನು ಹೇಳಿದ್ದು, ಅದರಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ನೀಡಿದ ಆಕೆಯ ಹೇಳಿಕೆಯಲ್ಲಿ, ಪ್ರಶ್ನಿತ ಸ್ವತ್ತಿನಲ್ಲಿ ಅರ್ಜಿದಾರನು ಹಿಡುವಳಿದಾರನಾಗಿ ಸ್ವಾಧೀನವನ್ನು ಹೊಂದಿದ್ದನೆಂದು ಆಕೆ ಸ್ಪಷ್ಟವಾಗಿ ಹೇಳಿದ್ದಾಳೆ.

5. ಇದಕ್ಕೆ ತದ್ವಿರುದ್ಧವಾಗಿ, 3ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ನಮೂನೆ ಸಂಖ್ಯೆ: 7ಎ ಇದರಲ್ಲಿನ ಅರ್ಜಿಯೊಂದಿಗೆ ಅರ್ಜಿದಾರನು ಹಾಜರುಪಡಿಸಿರುವ ದಸ್ತಾವೇಜುಗಳು ಸ್ವತಃ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ ತಿದ್ದುಪಡಿಯಾದ ಉಪಬಂಧಗಳ 77ಎ ಪ್ರಕರಣದ ಅಡಿಯಲ್ಲಿ ಕೋರಿದ ಪರಿಹಾರಕ್ಕೆ ಆತನನ್ನು ಸ್ಪಷ್ಟವಾಗಿ ಹಕ್ಕು ವಂಚಿತನನ್ನಾಗಿಸುತ್ತದೆಂದು ಹೇಳಿದ್ದಾರೆ. ಅವರ ಪ್ರಕಾರ, ಮೊದಲನೆಯದಾಗಿ, ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ನ್ನು ಹೊಂದಿರುವ ಜಮೀನು ಕೃಷಿ ಭೂಮಿಯಲ್ಲ; ತತ್ಪರಿಣಾಮವಾಗಿ, ಇದರಲ್ಲಿ ಅರ್ಜಿದಾರನಾಗಿರುವ ಸಕ್ಷಮ ಪ್ರಾಧಿಕಾರದ ಮುಂದೆ ಹಾಜರಾದ ಅರ್ಜಿದಾರನು, ವೃತ್ತಿಯಿಂದ ಕೃಷಿಕನಲ್ಲ, ಇದನ್ನು ಆತನು ನಮೂನೆ ಸಂಖ್ಯೆ 7ಎ ಇದರಲ್ಲಿ ಸಲ್ಲಿಸಿದ ತನ್ನ ಅರ್ಜಿಯಲ್ಲಿ ಸ್ವತಃ ಬಹಿರಂಗಪಡಿಸಿದ್ದು, ಅದರಲ್ಲಿ ಆತನು, ತಾನು ಕೃಷಿಕನಲ್ಲವೆಂಬ ಅರ್ಥದಲ್ಲಿ ತನ್ನ ವೃತ್ತಿ ವ್ಯವಹಾರವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಆತನ ಅರ್ಜಿಯಲ್ಲಿ, ಹಿಡುವಳಿದಾರನಾಗಿ ಆಕ್ಷೇಪಣೆಯಲ್ಲಿರುವ ಜಮೀನಿನ ಸ್ವಾಧೀನವನ್ನು ಹೊಂದಿರುವುದಾಗಿ ಮತ್ತು ಸಾಗುವಳಿ ಮಾಡುತ್ತಿದ್ದುದಾಗಿ ವಾದಿಸಿದಾಗ್ಯೂ, ಆತನು ಹಾಜರುಪಡಿಸಿದ ದಸ್ತಾವೇಜುಗಳಿಂದ ಕಂಡುಬರುವಂತೆ ಅದು ಸಾಗುವಳಿಯಾಗದಿರುವ ಜಮೀನಾಗಿದೆ.

6. ಮೊದಲನೆಯದಾಗಿ, ಕೋಲನಾಡು ಗ್ರಾಮ ಪಂಚಾಯಿತಿಯು ನೀಡಿದ ಅನುಬಂಧ–ಡಿ, ಡಿ1 ಮತ್ತು ಇ ಇವುಗಳಲ್ಲಿ ನೀಡಿರುವ ದಸ್ತಾವೇಜುಗಳು, ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ನ್ನು ಹೊಂದಿರುವ ಜಮೀನು ವಾಸದ ಸ್ವತ್ತಾಗಿದೆಯೇ ಹೊರತು ಕೃಷಿ ಸ್ವತ್ತಲ್ಲ ಎಂಬುದನ್ನು ಬಹಿರಂಗಪಡಿಸುತ್ತವೆ. ಇದಲ್ಲದೆ, ದಾವೆ ನಿಗದಿಯ ಬಾಬು ಸಂಖ್ಯೆ: 2ರ ಕ್ರಮ ಸಂಖ್ಯೆ 3ರಲ್ಲಿ ತೋರಿಸಿರುವ, ಪ್ರಶ್ನಿತ ಜಮೀನಿನ ಭಾಗಕ್ಕಾಗಿ 3ನೇ ಪ್ರತ್ಯರ್ಜಿದಾರನ ಸಹೋದರನು ಸಲ್ಲಿಸಿರುವ

ಅನುಬಂಧ–ಜಿ ಪ್ರಕಾರ, ಒ.ಎಸ್. ಸಂಖ್ಯೆ: 310/2002ರಲ್ಲಿನ ದಾವೆಯಲ್ಲಿ, ಪ್ರಶ್ನಿತ ಜಮೀನು ಒಣ ಭೂಮಿಯಾಗಿದೆ ಎಂದು ಸ್ಪಷ್ಟವಾಗಿ ತೋರಿಸಲಾಗಿದೆ. ಇದರೊಂದಿಗೆ, (1) ಶಾಖಾ ವ್ಯವಸ್ಥಾಪಕ, ಸಿಂಡಿಕೇಟ್ ಬ್ಯಾಂಕ್; (2) ವ್ಯವಸಾಯ ಸೇವಾ ಸಹಕಾರಿ ಸಂಘ/ಬ್ಯಾಂಕ್ ನಿಯಮಿತ ಮತ್ತು (3) ಕಾರ್ಯದರ್ಶಿ ಪಿಸಿಎಆರ್ ಬ್ಯಾಂಕ್ (ಭೂ ಅಭಿವೃದ್ಧಿ ಬ್ಯಾಂಕ್) ಬಂಟ್ವಾಳ ತಾಲ್ಲೂಕು ಇವರಿಗೆ ಅರ್ಜಿದಾರನು ಕಳುಹಿಸಿದ ನೋಟೀಸ್ ಆದ ಅನುಬಂಧ–ಹೆಚ್ ಇದರಲ್ಲಿ ಅರ್ಜಿದಾರನು ಹಾಜರುಪಡಿಸಿರುವ ಮತ್ತೊಂದು ದಸ್ತಾವೇಜಿದ್ದು, ಅದು ಮೇಲೆ ಹೇಳಲಾದ ಜಮೀನು ದಿನಾಂಕ: 18.03.1984ರ ಒಪ್ಪಂದ ಮೇರೆಗೆ ಆತನ ಸ್ವಾಧೀನದಲ್ಲಿತ್ತೆಂದು ಸೂಚಿಸುತ್ತದೆ. ಸದರಿ ನೋಟೀಸಿನಲ್ಲಿ, ನೀಡಲಾದ ಅನುಸೂಚಿಯು, ಪ್ರಶ್ನಿತ ಜಮೀನು ಒಣ ಭೂಮಿಯಾಗಿದೆ ಅಥವಾ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಪುಂಜಾ ಭೂಮಿಯಾಗಿದ್ದು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ 48ಎ ಪ್ರಕರಣದ ಅಡಿಯಲ್ಲಾಗಲಿ ಅಥವಾ 77ಎ ಪ್ರಕರಣದ ತಿದ್ದುಪಡಿಯಾದ ಉಪಬಂಧಗಳಲ್ಲಾಗಲಿ ಅದರ ಮಂಜೂರಾತಿಯನ್ನು ಪರಿಗಣಿಸಲಾಗದು ಎಂದು ಸದರಿ ಅನುಸೂಚಿಯು ಸೂಚಿಸುತ್ತದೆ.

7. ಇದಲ್ಲದೆ, ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ರಲ್ಲಿರುವ 57 ಸೆಂಟ್‌ಗಳ ವಿಸ್ತೀರ್ಣದ ಇಡೀ ಜಮೀನು ಅರ್ಜಿದಾರನ ಸ್ವಾಧೀನದಲ್ಲಿದೆ ಎಂದು ಆತನು ವಾದಿಸಿದಾಗ್ಯೂ, ಅರ್ಜಿದಾರನು ಸರ್ವೆ ಸಂಖ್ಯೆ 51/1ರಲ್ಲಿ ನಿರ್ಮಿಸಲಾಗಿರುವ ಕಟ್ಟಡದ ಸ್ವಾಧೀನವನ್ನು ಹೊಂದಿರುವನೇ ಹೊರತು ಇಡೀ 57 ಸೆಂಟ್‌ಗಳಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನವನ್ನು ಅಲ್ಲವೆಂದು ಹಾಗೂ 3ನೇ ಪ್ರತ್ಯರ್ಜಿದಾರನ ಪ್ರಕಾರ, ಉಳಿದ ಜಮೀನು ಈಗಲೂ ಆತನ ಸ್ವಾಧೀನ ಮತ್ತು ಅನುಭೋಗದಲ್ಲಿದ್ದು, ಅದನ್ನು ಅರ್ಜಿದಾರನಿಗೆ ಎಂದಿಗೂ ನೀಡಿಲ್ಲವೆಂಬುದು 3ನೇ ಪ್ರತ್ಯರ್ಜಿದಾರನು ಎತ್ತಿರುವ ಪ್ರತಿವಾದವಾಗಿದೆ ಎಂದು 3ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.

8. ಆದಾಗ್ಯೂ, ಈ ವ್ಯವಹರಣೆಗಳಲ್ಲಿ, ಕೋಲನಾಡು ಗ್ರಾಮದ ಸರ್ವೆ ಸಂಖ್ಯೆ: 51/1ನ್ನು ಹೊಂದಿರುವ ಜಮೀನಿನ ಸಂಬಂಧದಲ್ಲಿ ಅಧಿಭೋಗದ ಹಕ್ಕನ್ನು ಕೋರುವ ಹಕ್ಕನ್ನು ಅರ್ಜಿದಾರನು ಹೊಂದಿದ್ದಾನೆಂದು ಸ್ಥಿರೀಕರಿಸಲು 4ನೇ ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯವಾದಿಗಳು ಪ್ರಯತ್ನಿಸಿದ್ದಾರೆ. ಪ್ರಾಸಂಗಿಕವಾಗಿ, 4ನೇ ಪ್ರತ್ಯರ್ಜಿದಾರಳು, ಅರ್ಜಿದಾರನ ಕ್ಲೇಮನ್ನು ಬೆಂಬಲಿಸಿ ಸಕ್ಷಮ ಪ್ರಾಧಿಕಾರದ ಮುಂದೆ ಹೇಳಿಕೆಯನ್ನು ನೀಡಿರುವ ವ್ಯಕ್ತಿಯಾಗಿರುವಳು.

9. ದಾಖಲೆಯಲ್ಲಿರುವ ಸಾಕ್ಷ್ಯವನ್ನು ನೋಡಲಾಗಿ, ನಿರ್ದಿಷ್ಟವಾಗಿ ಅನುಬಂಧ–ಜಿ ಪ್ರಕಾರ ಅರ್ಜಿದಾರನು ಸ್ವತಃ ದಾಖಲಿಸಿರುವ ಮೂಲ ದಾವೆಯಲ್ಲಿನ ವಾದದ ದೃಷ್ಟಿಯಿಂದ, 3ನೇ ಮತ್ತು 4ನೇ ಪ್ರತ್ಯರ್ಜಿದಾರರು ಸಹೋದರ ಮತ್ತು ಸಹೋದರಿಯಾಗಿದ್ದಾಗ್ಯೂ, ಅವರು ಶತದಡ್ಡರಾಗಿದ್ದಾರೆ ಎಂದು ಅದು ಸ್ಪಷ್ಟವಾಗಿ ಸೂಚಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದದರೆ, ಅವರು ಪರಸ್ಪರ ವಿಶ್ವಾಸಪೂರ್ವಕವಾಗಿಲ್ಲ ಮತ್ತು ಕುಟುಂಬದ ಸ್ವತ್ತುಗಳ ಸಂಬಂಧದಲ್ಲಿ ಅವರ ನಡುವೆ ಆಂತರಿಕ ಕಲಹವಿದೆ. ಈ ಹಿನ್ನಲೆಯಲ್ಲಿ 4ನೇ ಪ್ರತ್ಯರ್ಜಿದಾರಳು, ಸಕ್ಷಮ ಪ್ರಾಧಿಕಾರ ಮುಂದೆ ಮತ್ತು ಈ ನ್ಯಾಯಾಲಯದ ಮುಂದೆಯು ಸಹ, ಈ ವ್ಯವಹರಣೆಗಳಲ್ಲಿ 3ನೇ ಪ್ರತ್ಯರ್ಜಿದಾರನ ಪರ ನ್ಯಾಯವಾದಿಗಳು ನಿವೇದಿಸಿಕೊಂಡಿರುವಂತೆ ಅರ್ಜಿದಾರನ ಕ್ಲೇಮನ್ನು ಬೆಂಬಲಿಸಿದ್ದಾಳೆ. ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯದ ಗುಣಾರ್ಹತೆಗಳ ವಿವೇಚನೆಯಿಂದ, 3ನೇ ಪ್ರತ್ಯರ್ಜಿದಾರನ ಸದರಿ ನಿವೇದನೆಗಳ ಬಗ್ಗೆ ಈ ನ್ಯಾಯಾಲಯಕ್ಕೆ ನಿರುಪಾಧಿಕವಾಗಿ ಯಾವುದೇ ಸಂಶಯವಿಲ್ಲ. ಆದಾಗ್ಯೂ, 3ನೇ ಮತ್ತು 4ನೇ ಪ್ರತ್ಯರ್ಜಿದಾರರ ನಡುವಿನ ಆಂತರಿಕ ವಿವಾದದಿಂದ ಅರ್ಜಿದಾರನು ಪ್ರಯೋಜನ ಪಡೆದುಕೊಳ್ಳಲು ಅನುಮತಿಸಲಾಗುವುದಿಲ್ಲ ಮತ್ತು ತತ್ಪರಿಣಾಮವಾಗಿ, ಕೃಷಿಯೇತರ ಭೂಮಿಯ, ನಿರ್ದಿಷ್ಟವಾಗಿ ವಾಸದ ಮನೆ ಇರುವ ಪುಂಜಾ ಜಮೀನಿನ ಸಂಬಂಧದಲ್ಲಿನ ಅಧಿಭೋಗದ ಹಕ್ಕನ್ನು ನೀಡುವ ಆತನ ಅರ್ಜಿಯನ್ನು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 77ಎ ಪ್ರಕರಣದ ಅಡಿಯಲ್ಲಿನ ಮಂಜೂರಾತಿಗೆ ಪರಿಗಣಿಸಲಾಗುವುದಿಲ್ಲ.

10. ತದನುಸಾರವಾಗಿ, ದಿನಾಂಕ: 13.1.2012ರ ಅಪೀಲು ಸಂಖ್ಯೆ: 922/2003ರಲ್ಲಿ ಕರ್ನಾಟಕ ಅಪೀಲು ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಸ್ಥಿರೀಕರಿಸುವ ಮೂಲಕ, ಅರ್ಜಿದಾರನು ಕ್ಲೇಮು ಮಾಡಿದ ಹಿಡುವಳಿಯ ತಿರಸ್ಕರಣೆಯನ್ನು ಸ್ಥಿರೀಕರಿಸಲಾಗಿದ್ದು, ಅದು ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಕೋರುವುದಿಲ್ಲ ಮತ್ತು ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.